ಕಾಫಿ, ನಾಷ್ಟಕ್ಕೆ ಬರುವ ಗಿರಾಕಿಗಳ ನಾಲಗೆಯಲ್ಲಿ ಟೀ, ನಾಷ್ಟದ ರುಚಿಗಿಂತಲೂ ಸುತ್ತಿಸುತ್ತಿ ಗಿರಕಿಹೊಡೆದು ಮತ್ತೆಮತ್ತೆ ಹಾಡಲ್ಪಡುವ ಹಿಂದಿ ಹಾಡುಗಳ ರುಚಿಯೇ ನಿಂತಿದೆ. ಅಷ್ಟರಮಟ್ಟಿಗೆ ಗ್ರಾಮಫೋನ್ ಮುಳಿಹುಲ್ಲಿನ ಮೂಲೆಯಂಗಡಿ ಕಂ ಹೋಟೆಲ್ ನಡೆಸುತ್ತಿದ್ದ ಉಪ್ಪಾಪನಿಗೂ, ಬಾಪನಿಗೂ ಬರುವ ಗಿರಾಕಿಗಳಿಗೂ ಬದುಕಿನ ಅವಿಭಾಜ್ಯ ಅಂಗವೇ ಆಗಿ ಹೋಗಿತ್ತು.

ಕಾಫಿ ಎಸ್ಟೇಟ್ ನಡೆಸುತ್ತಿದ್ದ ಕ್ರಿಶ್ಚಿಯನ್ ವ್ಯಕ್ತಿಯೊಬ್ಬ ಫಾರಿನ್‌ನಿಂದ ಹೊಸ ಟೇಪ್‌ರೆಕಾರ್ಡರ್ ತಂದಾಗ ಹಳೆಯ ಗ್ರಾಮಫೋನ್‌ನನ್ನು ಉಪ್ಪಾಪನಿಗೆ ಐವತ್ತು ರೂಪಾಯಿಗೆ ಮಾರಿದ್ದ. ಬಡತನದ ನಡುವೆಯೂ ಉಪ್ಪಾಪ ಉಮಾಮ್ಮಳ ಅಲೀಕತ್ತು ಮಾರಿ ಐವತ್ತು ರೂಪಾಯಿ ಹಣ ಹೊಂದಿಸಿದ್ದ. ಸುತ್ತಲೂ ಕಾಫಿ ತೋಟದಿಂದ ಆವೃತ್ತವಾಗಿದ್ದ ಮೂಲೆ ಅಂಗಡಿಯೇ ಸುತ್ತಲಿನ ನೂರಾರು ಎಕರೆ ಇರುವ ಕಾಫಿ ತೋಟದಲ್ಲಿ ಕೆಲಸ ಮಾಡುವ ಕೂಲಿಕಾರ್ಮಿಕರಿಗೆ ಮನರಂಜನಾ ತಾಣವಾಗಿತ್ತು. ದಿನಪತ್ರಿಕೆ ಓದಲು, ಟೀ, ಕಾಫಿ ಕುಡಿಯಲು, ಅಕ್ಕಿ, ದಿನಸಿ ಖರೀದಿಸಲು, ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮಫೋನ್ ತಿರುಗುತ್ತಲೇ ಹಾಡು ಮೊಳಗುವ ಕೌತುಕವನ್ನು ಕಾಣಲು ಅಲ್ಲಿ ಜನ ಸೇರುತ್ತಿದ್ದರು. ತನ್ನ ಹೋಟೆಲ್‌ನಲ್ಲಿ ಕರೆಂಟ್ ಇಲ್ಲದೆ ಚಲಿಸುವ ಈ ಗ್ರಾಮಫೋನ್ ಬಳಸಿ ಉಪ್ಪಾಪ ಗಿರಾಕಿಗಳನ್ನು ಖುಷಿಪಡಿಸಿದ್ದು ಮಾತ್ರವಲ್ಲದೆ ವ್ಯಾಪಾರದಲ್ಲೂ ಯಶಸ್ಸು ಕಂಡ ಎಂಬುದನ್ನು ಬಾಪ ಸದಾ ನೆನಪಿಸಿಕೊಳ್ಳುತ್ತಲೇ ಇದ್ದರು.

ಪುರಾತನ ಗ್ರಾಮಫೋನ್ ತನ್ನ ತಾನು ಹಾಡಿ-ಹಾಡಿ ಸವೆಸಿಕೊಂಡು ಮೂಲೆ ಸೇರಿದಾಗ ಉಪ್ಪಾಪನಿಗೆ ಬೇರೆ ದಾರಿ ಕಾಣಲಿಲ್ಲ. 17 ಮೈಲು ದೂರದ ಮಡಿಕೇರಿಗೆ ಸೈಕಲ್ ತುಳಿದು ಹೊರಟೇಬಿಟ್ಟ. ಸರಕಾರಿ ಕಚೇರಿಗೆ ಹೋಗಿ ರೇಡಿಯೋ ಬಳಸಲು 15 ರೂಪಾಯಿಯ ವಾರ್ಷಿಕ ಲೈಸೆನ್ಸ್ ಪಡೆದುಕೊಂಡ. ಆ ಕಾಲದಲ್ಲಿ ರೇಡಿಯೋ ಬಳಕೆ ಮಾಡುವವರು ಸರಕಾರದಿಂದ ಅನುಮತಿ ಪಡೆಯಬೇಕಾಗಿತ್ತು. ಸಾಮಾನ್ಯ ಜನರಿಗೆ ರೇಡಿಯೋ ಗಗನ ಕುಸುಮವೇ ಆಗಿದ್ದ ಕಾಲವದು. ಆಗ ತಾನೇ ತಮಿಳುನಾಡಿನ ಕೊಯಂಬತ್ತೂರಿನಿಂದ ವಲಸೆ ಬಂದು ಮಡಿಕೇರಿಯಲ್ಲಿ ರೇಡಿಯೋ, ವಾಚ್ ಅಂಗಡಿ ಹಾಕಿದ್ದ ಪಾಂಡಿಯನ್ ಅವರಿಂದ ಹೊಚ್ಚ ಹೊಸ ವಿದೇಶಿ ಆಮದಾದ ಫಿಲಿಫ್ಸ್ ರೇಡಿಯೋವನ್ನು ಮೂವತ್ತು ರೂಪಾಯಿ ಮೊತ್ತಕ್ಕೆ ಕೊಂಡುಕೊಂಡರು. ಸೈಕಲ್‌ನ ಹ್ಯಾಂಡಲ್‌ಗೆ ರೇಡಿಯೋವನ್ನು ನೇತುಹಾಕಿ ಮೂಲೆಯಂಗಡಿಗೆ ಹಿಂದಿರುಗಿದ್ದ ಉಪ್ಪಾಪ ದಪ್ಪ-ದಪ್ಪನೆಯ ನಾಲ್ಕು ಬ್ಯಾಟರಿಗಳನ್ನು ಹಾಕಿ ರೇಡಿಯೋದ ಕಂಠಕ್ಕೆ ಜೀವ ತುಂಬಿದ್ದ. ಎಫ್‌ಎಂ, ಎಸ್‌ಡಬ್ಲ್ಯು, ಎಂಡಬ್ಲ್ಯು ಮೋಡ್‌ಗಳಿದ್ದ ಆ ರೇಡಿಯೋದಲ್ಲಿ ಸಿಲೋನ್, ತಿರುವನಂತಪುರಂ, ಮೈಸೂರು ಆಕಾಶವಾಣಿ ಕೇಂದ್ರಗಳ ಕಾರ್ಯಕ್ರಮಗಳು ನಿರಂತರವಾಗಿ ಕೇಳಿಸುತ್ತಿದ್ದವು. ಸಿಲೋನ್ ಮತ್ತು ತಿರುವನಂತಪುರಂ ಸ್ಟೇಷನ್‌ಗಳು ಅಷ್ಟು ಸ್ಪಷ್ಟವಾಗಿ ಕೇಳಿಸದಿದ್ದರೂ ಶನಿವಾರ ಮಧ್ಯಾಹ್ನದ ತುಸುಬಿಸಿಲಿನ ಹೊತ್ತು ಹಳೆಯ ಮಲಯಾಳಂ ಸಿನಿಮಾ ಗೀತೆಗಳು, ಮಾಪಿಳ್ಳೆಪಾಟ್‌ಗಳು ಪ್ರಸಾರವಾಗುತ್ತಿದ್ದದ್ದನ್ನು ಅಸ್ಪಷ್ಟತೆಯ ಜೊತೆಯಲ್ಲಿಯೇ ಉಪ್ಪಾಪ ಕೇಳಿ ಸ್ಪಷ್ಟಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರಂತೆ. ಕೆಲವು ಬಾರಿ ರೇಡಿಯೋ ಸರಿಯಾಗಿ ಕೇಳದಿದ್ದಾಗ ಎತ್ತರದ ಜಾಗದಲ್ಲಿ, ಗುಡ್ಡ ದಿಬ್ಬದ ಮೇಲೆ, ಮರದ ಮೇಲೆ ರೇಡಿಯೋ ಜೊತೆಯಲ್ಲಿ ಹತ್ತಿ ಕುಳಿತು ಹಾಡು ಕೇಳುತ್ತಿದ್ದ ಉಪ್ಪಾಪನ ಸಂಗೀತದ ಹುಚ್ಚನ್ನು ಯಾರಿಂದಲೂ ತಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಉಪ್ಪಾಪ ಟೇಪ್‌ರೆಕಾರ್ಡರ್ ಬರುವ ಮೊದಲೇ ತನ್ನ ಬದುಕಿನ ಧ್ವನಿಯನ್ನು ಹಾಡಿ ಮುಗಿಸಿದ್ದ. ಈಗೇನಾದರೂ ಉಪ್ಪಾಪ ಬದುಕಿದ್ದರೆ ಈಯರ್ ಫೋನ್ ಕಿವಿಗೆ ತುರುಕಿಸಿ ಹೊಸ ಹೊಸ ಹಾಡುಗಳನ್ನು ಕೇಳುತ್ತಾ ಸಂಗೀತ ಸಾಗರದಲ್ಲಿ ಮಿಂದೇಳುತ್ತಿದ್ದುದಂತೂ ಸುಳ್ಳಲ್ಲ.

ಇನ್ನು ಉಮ್ಮ ಬಾಪನನ್ನು ಮದುವೆಯಾಗಿ ಬಂದದ್ದು ಇದೇ ಮೂಲೆಯಂಗಡಿಗೆ. ಉಮ್ಮ ಬರುವಾಗ ಮೂಲೆಯಂಗಡಿಯಲ್ಲಿದ್ದ ಗ್ರಾಮಫೋನ್ ಮೂಲೆ ಸೇರಿತ್ತು. ರೇಡಿಯೋ ಇಂದೋ ನಾಳೆಯೋ ಎಂಬಂತೆ ತನ್ನ ಕಂಠವನ್ನು ಮತ್ತಷ್ಟು ಕರ್ಕಶಗೊಳಿಸಿತ್ತು. ಎಂಬತ್ತರ ದಶಕವದು. ಬಾಪನ ಹಿರಿಯ ಅಕ್ಕನ ಗಂಡ ಕುಟುಂಬದಲ್ಲೇ ಮೊದಲ ವ್ಯಕ್ತಿಯಾಗಿ ಅರೇಬಿಯಾದ ಬೆಹರೈನ್ ದೇಶಕ್ಕೆ ಕೆಲಸಕ್ಕೆಂದು ತೆರಳಿದ್ದರು. ಎರಡು ವರ್ಷಗಳ ನಂತರ ಹಿಂದಿರುಗಿ ಬರುವಾಗ ಜಪಾನ್‌ನಲ್ಲಿ ತಯಾರಾದ ಪ್ಯಾನಸೋನಿಕ್ ಕಂಪೆನಿಯ ಇನ್‌ಬಿಲ್ಟ್